# ಕರ್ನಾಟಕ ವಿಧಾನ ಸಭೆ

ಸೋಮವಾರ 9ನೇ 1998ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಮಧ್ಯಾಹ್ನ : 12- 10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ರಮೇಶ್ ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು.

## 1. ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚೆ

**ಅ) ವಿಷಯ: ಗುಲ್ಬರ್ಗಾ ಜಿಲ್ಲೆಯ ಶಹಬಾದ್‌ನ ಹೆಚ್.ಎಂ.ಪಿ. ಸಿಮೆಂಟ್ ಕಾರ್ಖಾನೆಯ ಕಾರ್ಮಿಕರಿಗೆ ವೇತನ.**

+ ಶ್ರೀ ಸಿ.ಗುರುನಾಥ್: ಮಾನ್ಯ ಅಧ್ಯಕ್ಷರೆ, ನನಗೆ ದಯವಿಟ್ಟು ಮಾತನಾಡಲು ಅವಕಾಶ ಕೊಡಬೇಕು.

ಅಧ್ಯಕ್ಷರು: ಅವಿಶ್ವಾಸ ನಿರ್ಣಯ ಚರ್ಚೆಗೆ ಬಂದಾಗ ಅದು ಪೂರ್ಣವಾಗಬೇಕು. ನಿಮ್ಮಂತಹ ಸದಸ್ಯರು ಅದನ್ನು ಮುಂದುವರೆಸಿ ನಮಗೆಲ್ಲರಿಗೂ ಅವಕಾಶ ಕೊಡಿ ಅಂದರೆ ಹೇಗೆ?

ಶ್ರೀ ಸಿ.ಗುರುನಾಥ್: ಬಹಳ ಅತಿ ಜರೂರಾದ ವಿಷಯ ಇದೆ.

ಅಧ್ಯಕ್ಷರು: ಹೌದು, ಎಲ್ಲಾ ಸದಸ್ಯರಿಗೂ ಜರೂರಾದ ವಿಷಯಗಳು ಇರುತ್ತವೆ.

ಶ್ರೀ ಸಿ.ಗುರುನಾಥ್: ಮಾನ್ಯ ಅಧ್ಯಕ್ಷರೆ, ಗುಲ್ಬರ್ಗ ಜಿಲ್ಲೆಯ ಶಹಬಾದ್ ವಿಷಯದ ಬಗ್ಗೆ ಸರ್ಕಾರದ ಉತ್ತರ ಕೇಳಬೇಕಾಗಿದೆ.

ಅಧ್ಯಕ್ಷರು: ಮಂತ್ರಿಗಳಾಗಿದ್ದವರು ರೂಲ್ಸ್ ಬಗ್ಗೆ ತಿಳಿದುಕೊಂಡಿರಬೇಕು. ಅವರಿಗೊಂದು ನಿಮಗೊಂದು ಬೇಡ. ಅವಿಶ್ವಾಸ ನಿರ್ಣಯದ ಮೇಲೆ ಚರ್ಚೆ ಪೂರ್ಣಗೊಂಡ ನಂತರ ವಿಷಯಗಳನ್ನು ತೆಗೆದುಕೊಂಡು ಮಾತನಾಡಬಹುದು, ಈಗ ಬೇಡವೆಂದು ಅವರಿಗೂ ಹೇಳಿದ್ದೇನೆ.

ಶ್ರೀ ಸಿ.ಗುರುನಾಥ್: ಇಂತಹ ವಿಷಯಗಳು ಬಂದಾಗ, ಅವಿಶ್ವಾಸ ನಿರ್ಣಯ ಬದಿಗಿಟ್ಟು ಇದಕ್ಕೆ ಅವಕಾಶ ಕೊಡಬೇಕು.

ಶ್ರೀ ವೈಜನಾಥ್ ಪಾಟೀಲ್: ನಾನೊಂದು ವಿಷಯವನ್ನು ಮೊನ್ನೆ ಪ್ರಸ್ತಾಪ ಮಾಡಿದಾಗ ನಂತರ ತೆಗೆದುಕೊಳ್ಳೋಣವೆಂದು ಹೇಳಿದ್ದೀರಿ. ದಯಮಾಡಿ ಈಗ

ಅದನ್ನು ತೆಗೆದುಕೊಳ್ಳಬೇಕು.

ಅಧ್ಯಕ್ಷರು: ನಿಮಗೆ ಅರ್ಥವಾಗುವುದಿಲ್ಲ. ಇನ್ನು ಅನೇಕ ಸದಸ್ಯರು ಬಹಳ ಮುಖ್ಯವಾದ ವಿಷಯಗಳ ಬಗ್ಗೆ ಚರ್ಚೆ ಮಾಡಲು ನೋಟೀಸ್ ಕೊಟ್ಟಿದ್ದಾರೆ. ಅವಿಶ್ವಾಸ ನಿರ್ಣಯ ಚರ್ಚೆಯಾದ ಮೇಲೆ ತೆಗೆದುಕೊಳ್ಳೋಣವೆಂದು ಹೇಳಿದ್ದೇನೆ. ಅವರಿಗೊಂದು ನಿಮಗೊಂದು ಮಾಡುವುದಕ್ಕಾಗುವುದಿಲ್ಲ. ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆ ಪೂರ್ಣಗೊಂಡ ನಂತರ ತೆಗೆದುಕೊಳ್ಳೋಣ.

ಶ್ರೀ ವೈಜನಾಥ್ ಪಾಟೀಲ್: ಇಲ್ಲಿಯತನಕ ತೆಗೆದುಕೊಂಡಿದ್ದು ಇದೆ. ತಾವು ದಯಮಾಡಿ ಅವಕಾಶ ಕೊಡಬೇಕು.

ಶ್ರೀ ಸಿ.ಗುರುನಾಥ್: ಕಾರ್ಮಿಕರಿಗೆ ಕೊಡತಕ್ಕ ವೇತನದ ಬಗ್ಗೆ ತಹಶೀಲ್ದಾರ್ ರವರು ಕ್ರಮ ತೆಗೆದುಕೊಂಡಿದ್ದರು. ಅದರ ವಿರುದ್ಧವಾಗಿ ಸರ್ಕಾರದವರು ಒಂದು ಆದೇಶ ಹೊರಡಿಸಿದ್ದಾರೆ. ಆ ಆದೇಶಕ್ಕೆ ಕ್ಯಾಬಿನೇಟ್ ಡಿಸಿಷನ್ ಆಯಿತಾ? ಕೆಲಸ ಮಾಡಿದವರಿಗೆ ವೇತನ ಕೊಡಬಾರದೆಂದು ಡಿಸಿಷನ್ ಆಯಿತಾ? ಈಗಾಗಲೇ ಅಲ್ಲಿ ಜನ ಸಾಯುತ್ತಿದ್ದಾರೆ ಅವರೇನು ಮಣ್ಣು ತಿನ್ನಬೇಕೇ? ಒಂದು ವರ್ಷದಿಂದ ಹೀಗೆ ಆಗುತ್ತಿದೆ. ಅದಕ್ಕಾಗಿ ಇದು ಅತಿ ಅವಶ್ಯ ಇದೆ. ಅದರ ಬಗ್ಗೆ ನಾನು ಸವಿಸ್ತಾರ ಚರ್ಚೆಮಾಡಿ ಸರ್ಕಾರದಿಂದ ಉತ್ತರ ಬಯಸುತ್ತೇನೆ. ದಯಮಾಡಿ ನನಗೆ ಮೊದಲನೆಯದಾಗಿ ಅವಕಾಶ ಮಾಡಿಕೊಡಿ. 11 ಗಂಟೆಗೆ ಆಕ್ಷನ್ ನಡೆದಿದೆ. ಆ ಆಕ್ಷನ್ ನಿಲ್ಲಬಾರದು. ಜನ ಸಾಯುತ್ತಿದ್ದಾರೆ. ಅದರ ಬಗ್ಗೆ ಸರ್ಕಾರ ಉತ್ತರ ಕೊಡಬೇಕು. ದಯಮಾಡಿ ನಾನು ಮಾತನಾಡಲಿಕ್ಕೆ ಅವಕಾಶ ಕೊಡಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ: ಅವಿಶ್ವಾಸ ನಿರ್ಣಯಕ್ಕಿಂತ ಬಹಳ ಮುಖ್ಯವಾದ ವಿಷಯ ಅಂದರೆ ಖಂಡಿತಾ ಮೊದಲು ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅಲ್ಲಿಂದಲೇ ಚರ್ಚೆ ಪ್ರಾರಂಭವಾಗಲಿ. ಅವರಿಗೇ ಮೊದಲು ಅವಕಾಶ ಮಾಡಿಕೊಡಿ. ಆಡಳಿತ ಪಕ್ಷದ ಸದಸ್ಯರಿಗೇನೇ ಇಷ್ಟೊಂದು ಈ ಸರ್ಕಾರದ ಬಗ್ಗೆ ಅವಿಶ್ವಾಸ ಇರಬೇಕಾದರೆ ಅಲ್ಲಿಂದ ಚರ್ಚೆ ಪ್ರಾರಂಭವಾಗಲಿ. ಅವರಿಗೆ ತಾವು ಅವಕಾಶ ಕೊಡಿ. ದಯಮಾಡಿ ಚರ್ಚೆ ಅವರಿಂದ ಪ್ರಾರಂಭವಾದರೆ ಈ ಕಡೆಯವರೆಲ್ಲ ಬೆಂಬಲ ಕೊಡುತ್ತೇವೆ.

ಅಧ್ಯಕ್ಷರು: ನಿಮ್ಮ ಹೃದಯ ವೈಶಾಲತೆಗೆ ನಾನು ನಿಮ್ಮನ್ನು ಅಭಿನಂದಿಸುತ್ತೇನೆ. ಆದರೆ ಒಂದೊಂದು ದಿವಸಕ್ಕೆ ಒಂದೊಂದು ರೀತಿ ಆಗಬಾರದು. ಒಂದು ದಿವಸ ಚರ್ಚೆಯಾಗುವಾಗ ಅವಿಶ್ವಾಸ ನಿರ್ಣಯಕ್ಕೆ ಗಾಂಭೀರ್ಯ ಎಲ್ಲಿ? ಅದು ಚರ್ಚೆಯಾಗದೆ ಬೇರೆ ವಿಷಯ ತೆಗೆದುಕೊಳ್ಳಬಾರದು ಎಂದು ಹೇಳುತ್ತೀರಿ. ಇವತ್ತು ಅವರು ಮಾತನಾಡಲಿ ಎಂದು ಹೇಳುತ್ತೀರಿ. ಹಾಗಾದರೆ ನನ್ನದೇನೂ ಅಭ್ಯಂತರ ಇಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ಅವರು ಹೇಳುವಂಥ ವಿಷಯವೇ ಅವಿಶ್ವಾಸ ನಿರ್ಣಯಕ್ಕೆ ಬಹಳ ಪ್ರಮುಖವಾದಂಥ ಅಂಶ. ಅವರಿಂದ ಭಾಷಣ ಶುರುವಾಗಲಿ.

ಅಧ್ಯಕ್ಷರು: ಈಗ ಅವರದ್ದು ಯಾವುದೋ ಒಂದು ಸೊಸೈಟಿಯದ್ದು ಇದೆ. ಇವರದ್ದು ಒಂದು ಮಿಲ್‌ನದ್ದು ಇದೆ. ಇನ್ನೊಬ್ಬರದ್ದು ಇನ್ನೊಂದು ಇದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಆದ್ದರಿಂದಲೇ ಈ ಸರ್ಕಾರಕ್ಕೆ ಮುಂದುವರಿಯುವುದಕ್ಕೆ ನೈತಿಕ ಹಕ್ಕಿಲ್ಲ ಎಂದು ಹೇಳಬೇಕೆಂದು ಇದ್ದಾರೆ. ಆದ್ದರಿಂದ ಅಲ್ಲಿಂದಲೇ ಅವರು ಶುರುಮಾಡಲಿ. ಅವರಿಗೆ ಅವಕಾಶಕೊಡಬೇಕೆಂದು ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು: ನಿಮ್ಮ ಸಲಹೆಯನ್ನು ಗಮನಕ್ಕೆ ತೆಗೆದುಕೊಂಡಿದ್ದೇನೆ. ನಾನು ಮತ್ತೊಮ್ಮೆ ಹೇಳುತ್ತೇನೆ. ಬೇರೆಬೇರೆ ವಿಷಯಗಳಿಗೆ ಸಂಬಂಧಪಟ್ಟಂತೆ ಇನ್ನೂ ಅನೇಕ ಜನ ಸದಸ್ಯರುಗಳು ನೋಟೀಸ್‌ಗಳನ್ನು ಕೊಟ್ಟಿದ್ದಾರೆ. ಆ ಎಲ್ಲಾ ವಿಚಾರಗಳನ್ನು ಅವಿಶ್ವಾಸ ನಿರ್ಣಯದ ಚರ್ಚೆ ಪೂರ್ಣಗೊಂಡ ನಂತರ ನಾನು ತೆಗೆದುಕೊಳ್ಳುತ್ತೇನೆ.

ಶ್ರೀ ವೈಜನಾಥ ಪಾಟೀಲ್: ಅದು ಅಲ್ಲಿ ಆ್ಯಕ್ಷನ್‌ನ್ನು ಮುಂದೂಡುತ್ತಿದ್ದಾರೆ. ಆ್ಯಕ್ಷನ್ ಆಗದೇ ಇದ್ದರೆ ಕಾರ್ಮಿಕರಿಗೆ ಸಂಬಳ ಸಿಗುವುದಿಲ್ಲ. ಅವಿಶ್ವಾಸ ನಿರ್ಣಯವನ್ನು ಒಂದೆರಡು ದಿವಸ ಮುಂದಕ್ಕೆ ಹಾಕಬಹುದು. ಆದರೆ ಇದರ ಚರ್ಚೆ ಮೊದಲು ಆಗಬೇಕು.

ಶ್ರೀ ಪಿ.ಸಿ.ಸಿದ್ಧನಗೌಡರ್: ನಾನು ತಮ್ಮ ಗಮನಕ್ಕೆ ಒಂದು ವಿಷಯವನ್ನು ತಂದಿದ್ದೇನೆ. ಸಹಕಾರ ಸಂಘ ಚುನಾವಣೆ ಮುಂದೆ ಹಾಕಬೇಕು ಎಂದು ಸರ್ಕಾರ ಆದೇಶ ಕೊಡುತ್ತಿದೆ. ಈ ಕಡೆ ಸೂಪರ್ ಸೀಡ್ ಮಾಡುತ್ತಾರೆ. ಇದು ಕೋರ್ಟಿನಲ್ಲಿ ಪೆಂಡಿಂಗ್ ಇದೆ. ಅದು ತಪ್ಪಾಗುತ್ತದೆ. ಆದ್ದರಿಂದ ಇದರ ಬಗ್ಗೆ ನಾನು ಹೇಳುತ್ತೇನೆ. ತಾವು ಇದನ್ನು ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಅಧ್ಯಕ್ಷರು: ಯಾವಾಗ ತೆಗೆದುಕೊಳ್ಳುತ್ತೇನೆ ಎಂದು ತಮಗೆ ನಾನು ಹೇಳಿದ್ದೇನೆ. ನನ್ನ ಚೇಂಬರ್‌ಗೆ ಬಂದು ತಾವು ನನ್ನನ್ನು ಭೇಟಿಯಾದಾಗ ತಮಗೆ ನಾನು ಹೇಳಿದ್ದೇನೆ ಅದನ್ನು ಯಾವಾಗ ತೆಗೆದುಕೊಳ್ಳುತ್ತೇನೆ ಎಂದು. ಗುರುನಾಥ್‌ರವರೇ ತಾವು ಕುಳಿತುಕೊಳ್ಳಿ. ನಿಮ್ಮ ನೋಟೀಸ್ ನನಗೆ ತಲುಪಿದೆ. ತಾವು ಮತ್ತು ಇನ್ನು ಕೆಲವು ಸದಸ್ಯರುಗಳು ಕೊಟ್ಟಿರತಕ್ಕಂಥಾದ್ದು ಇದೆ. ನಾನು ಈ ಪ್ರಿವಿಲೇಜ್ ಬಂದಾಗ ಕೂಡಲೇ I have to give him permission to make a submission. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಏನೆಂದರೆ ಪೂರ್ವಭಾವಿಯಾಗಿ ಹೇಳುವುದಾದರೆ ಎರಡು ಮಾತು ಹೇಳಿಬಿಡಿ.

SRI H.N.NANGEGOWDA: I will leave it to your discretion.

ಶ್ರೀ ಸಿ.ಗುರುನಾಥ್: ಏಕೆಂದರೆ ನಾನು ವಿರುದ್ಧವಾಗಿ ಮಾತನಾಡುತ್ತೇನೆ ನೋಡಿ....

ಅಧ್ಯಕ್ಷರು: ಏನಪ್ಪ?

ಶ್ರೀ ಸಿ.ಗುರುನಾಥ್: ನನಗೆ ಅವಕಾಶ ಮಾಡಿಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಇಲ್ಲ ಎಂದು ಹೇಳಿದ್ದೇನಲ್ಲಾ...

ಶ್ರೀ ಸಿ.ಗುರುನಾಥ್: ಹಾಗಾದರೆ ಪ್ರಸ್ತಾವದ ಪರವಾಗಿ ನಾನು ಮಾತನಾಡುವುದಕ್ಕೆ ಅವಕಾಶ ಇದೆಯಾ? ಅವರು ತಂದಿರುವಂಥ ಅವಿಶ್ವಾಸ ನಿರ್ಣಯದ ಬಗ್ಗೆ.....

ಅಧ್ಯಕ್ಷರು: ನೀವು ಏನು ಬೇಕಾದರೂ ಮಾತನಾಡಿರಿ. ನೀವು ಸದಸ್ಯರು.

ಶ್ರೀ ಸಿ.ಗುರುನಾಥ್: ಹಾಗಾದರೆ ನಾವು ಹಾಗೆ ಮಾಡಬೇಕಾಗುತ್ತದೆ.

ಅಧ್ಯಕ್ಷರು: ನೀವು ಏನಾದರೂ ಮಾಡಿಕೊಳ್ಳಿ. ನನಗೇನು ಹೆದರಿಸುತ್ತೀರಾ?

ಶ್ರೀ ಸಿ.ಗುರುನಾಥ್: ಅಲ್ಲಿ ಜನ ಉಪವಾಸಬಿದ್ದು ಸಾಯುವುದಕ್ಕೆ ಹತ್ತಿದ್ದಾರೆ. ಇದು ಬಹಳ ಜರೂರು ಎಂದು ಅನ್ನಿಸುವುದಿಲ್ಲವೇ? ಇಲ್ಲಿ ಮಾತನಾಡುವುದಕ್ಕೆ ಇದು ನಮ್ಮ ಹಕ್ಕು ಇಲ್ಲವೇನು?

ಅಧ್ಯಕ್ಷರು: ಗುರುನಾಥರವರೇ, ನೀವು ಈ ಸದನದ ಸದಸ್ಯರು ಇದ್ದೀರಿ. ನೀವು ಮಾತನಾಡುವ ಹಕ್ಕನ್ನು ಕಸಿದುಕೊಳ್ಳುವುದು ನನಗೆ ಸಾಧ್ಯವಿಲ್ಲ. ನಾನು ಆ ಪ್ರಯತ್ನವನ್ನು ಮಾಡುವುದಿಲ್ಲ. ನೀವು ಮೋಷನ್ ಪರ ಮಾತನಾಡುತ್ತೀರೋ, ವಿರುದ್ಧವಾಗಿ ಮಾತನಾಡುತ್ತಿರೋ ಅದು ನಿಮ್ಮ ಇಷ್ಟ. ಅದು ನನಗೆ ಸಂಬಂಧ ಇಲ್ಲ. ಅದು ನೀವಾಯಿತು, ನಿಮ್ಮ ಪಕ್ಷವಾಯಿತು. ನಾನು ಹೇಳಿರುವುದು ಇಷ್ಟೇ. ಅವಿಶ್ವಾಸ ನಿರ್ಣಯದ ಚರ್ಚೆ ಪೂರ್ಣಗೊಂಡ ನಂತರ ನಿಮಗೆ ಅವಕಾಶ ಕೊಡುತ್ತೇನೆ ಎಂದು ಹೇಳಿದ್ದೇನೆ.

ಶ್ರೀ ಸಿ.ಗುರುನಾಥ್: ಇದು ಬಹಳ ಜರೂರಾದ ವಿಷಯ ಇದೆ ಎಂದು ನಾನು ನಿಮಗೆ ಹೇಳುತ್ತಿದ್ದೇನೆ. ಅಲ್ಲಿ ಜನರು ಪ್ರತಿದಿವಸ ಸಾಯುತ್ತಿದ್ದಾರೆ. ಅವರಿಗೆ ಹೊಟ್ಟೆಗೆ ಅನ್ನ ಇಲ್ಲ. ಆ ಜನ ಒಂದು ವರ್ಷದಿಂದ ಉಪವಾಸ ಇದ್ದಾರೆ. ಇವತ್ತಿನ

ದಿವಸ ಸರ್ಕಾರ ಹೊರಡಿಸಿರತಕ್ಕಂಥ ಆದೇಶ ಏನಿದೆ, ಅದರ ವಿರುದ್ಧವಾಗಿ ಈಗ ನಡೆದುಕೊಂಡಿದ್ದಾರೆ. ಹರಾಜು ಮಾಡಿ ಕೆಲಸಗಾರರಿಗೆ ಸಂಬಳ ಕೊಡತಕ್ಕಂಥಾದ್ದು ಏನಿದೆ, ಆ ವೇತನ ಕೊಡುವ ಸಲುವಾಗಿ ಸರ್ಕಾರ ಎಂಟು ತಿಂಗಳು ಮೊದಲು ಒಂದು ನೋಟೀಸ್ ಜಾರಿ ಮಾಡಿತ್ತು. ಸರ್ಕಾರದವರು ಏನೇನು ಮಾಡಿದ್ದಾರೆ ಎಂದು ನಮಗೆ ಇವತ್ತು ಹೇಳಬೇಕಾಗುತ್ತದೆ....

ಅಧ್ಯಕ್ಷರು: ಅರಗ ಜ್ಞಾನೇಂದ್ರ ಅವರು ಈಗ ಭಾಷಣ ಪ್ರಾರಂಭ ಮಾಡಬೇಕಿತ್ತು. ಶ್ರೀಮಾನ್ ನಂಜೇಗೌಡರು ನಿಯಮ 191ರ ಕೆಳಗೆ ಒಂದು ನೋಟೀಸ್‌ನ್ನು ಕೊಟ್ಟಿದ್ದಾರೆ. ಅವರು ಪ್ರಿವಿಲೇಜ್‌ಗೆ ನೋಟೀಸ್ ಕೊಟ್ಟಾಗ ನಾನು ಅವರಿಗೆ I have to allow him to make a submission. ಅವರದ್ದಾದ ಮೇಲೆ ಜ್ಞಾನೇಂದ್ರ ಅವರು ಭಾಷಣ ಶುರು ಮಾಡುತ್ತಾರೆ. ನಾನು ರೂಲ್ಸ್ ಪ್ರಕಾರ ಏನು ಮಾಡಬೇಕು ಎಂದು ಹೇಳಿ ರೂಲ್ಸ್‌ನ್ನು ಅವರಿಗೆ ವಿವರಣೆ ಮಾಡಿದರೂ ಕೂಡ ಆಡಳಿತ ಪಕ್ಷದ ಸದಸ್ಯರೇ ಈರೀತಿ ಅವಿಶ್ವಾಸ ನಿರ್ಣಯ ಚರ್ಚೆಗೆ ಅಡ್ಡಿಮಾಡಿ ಇದನ್ನು ಅರ್ಥಮಾಡಿಕೊಳ್ಳದಿದ್ದರೆ ತಾವು (ಮುಖ್ಯಮಂತ್ರಿಗಳು) ಇದನ್ನು ಹೇಗೆ ಸರಿಪಡಿಸುತ್ತೀರಿ? You have to take a decision.

ಶ್ರೀ ಜೆ.ಎಚ್.ಪಟೇಲ್ (ಮುಖ್ಯಮಂತ್ರಿ): ಈ ಸದನದಲ್ಲಿ ನಮ್ಮ ಪಕ್ಷದವರು ಅವಿಶ್ವಾಸ ನಿರ್ಣಯ ಮೂಲಕ ಏನು ಹೇಳುತ್ತಾರೋ ಹೇಳಿಕೊಳ್ಳಲಿ. ಇದರ ಬಗ್ಗೆ ನನಗೇನೂ ಸಂಕೋಚ ಇಲ್ಲ. ಆದರೆ ತಮ್ಮ ನಿರ್ದೇಶನದ ಪ್ರಕಾರ ಈ ವಿಷಯವನ್ನು ಸರ್ಕಾರದ ಗಮನಕ್ಕೆ ತಂದು ಇದಕ್ಕೆ ಏನಾದರೂ ಪರಿಹಾರ ಕಂಡುಹಿಡಿಯುವುದಕ್ಕೆ ಸಾಧ್ಯವಿದ್ದರೆ ಸರ್ಕಾರ ಕಂಡುಹಿಡಿಯುತ್ತದೆ, ಅಷ್ಟೆ.

ಶ್ರೀ ಸಿ.ಗುರುನಾಥ್: ಪರಿಹಾರ ಅಲ್ಲ, ಜನ ಸಾಯುತ್ತಿದ್ದಾರೆ... ಪರಿಹಾರ ಕಂಡುಹಿಡಿಯುವುದಕ್ಕೆ ತೊಡಗಿ ಈಗ ಒಂದು ವರ್ಷವಾಯಿತು. ನಾನು 20 ಸಲ ಮುಖ್ಯಮಂತ್ರಿಗಳ ಮೊರೆ ಹೋಗಿದ್ದೇನೆ. ಆದರೆ ಈ ಕಾರ್ಖಾನೆಗೆ ಸಂಬಂಧಪಟ್ಟ ಹಾಗೆ ಬೇಜವಾಬ್ದಾರಿಯಿಂದ ಅವರು ನಡೆದುಕೊಂಡಿದ್ದಾರೆ. ಇದರ ಬಗ್ಗೆ ನನಗೆ ಹೇಳಬೇಕಾಗಿದೆ. ಯಾವರೀತಿ ಈ ಸರ್ಕಾರ ಇದೆಯೆಂದರೆ, ಇಲ್ಲೇನು ಬೋರ್ಡು ಹಾಕಿದ್ದಾರಲ್ಲಾ, ಸರ್ಕಾರದ ಕೆಲಸ ದೇವರ ಕೆಲಸ ಎಂದು. ಮೊದಲು ನೀವು ಇದರ ಬಗ್ಗೆ ಪ್ರಸ್ತಾವನೆ ಮಾಡಿ. ಇದು ಸರ್ಕಾರದ ಕೆಲಸ ಇದೆ, ದೇವರ ಕೆಲಸ ಇದೆ.

ಅಧ್ಯಕ್ಷರು: ಆಯ್ತು. ಮಾನ್ಯ ಗುರುನಾಥ್‌ರವರೇ, ನೀವು ಹೇಳಿದ ಹಾಗೆ ಸದನ ನಡೆಯಬೇಕೋ ಅಥವಾ ರೂಲ್ಸ್ ಪ್ರಕಾರ ನಾನು ಸೂಚನೆ ಕೊಟ್ಟ ಹಾಗೆ ನಡೆಯಬೇಕೋ?

ಶ್ರೀ ಸಿ.ಗುರುನಾಥ್: ಮಾತನಾಡುವುದಕ್ಕೆ ನಮಗೆ ಅಧಿಕಾರ ಇದೆ. ಆ

ಅಧಿಕಾರವನ್ನು ತಾವು ಕೊಡಬೇಕು. ಇದು ಬಹಳ ಜರೂರಾದ ವಿಷಯವೆಂದು ನಾನು ಕೇಳುತ್ತಿದ್ದೇನೆ. ಇವತ್ತು ಶಹಾಬಾದ್ ನಗರದಲ್ಲಿ 11 ಗಂಟೆಗೆ ಆ್ಯಕ್ಷನ್ ಏನು ಆಗುತ್ತಿದೆ, ಅದನ್ನು ಸರ್ಕಾರ ನಿಲ್ಲಿಸಿದ್ದಾರೆ. ಅದು ಆ್ಯಕ್ಷನ್ ಆಗಬೇಕು ಎಂದು ಒತ್ತಾಯ ಮಾಡುವ ಸಲುವಾಗಿ ನಾನು ತಮ್ಮ ಗಮನಕ್ಕೆ ತಂದಿದ್ದೇನೆ.

ಅಧ್ಯಕ್ಷರು: ಲೇಬರ್ ಮಿನಿಸ್ಟರ್ ಯಾರಿದ್ದಾರೆ? You can take action. You may examine this matter immediately and take action. ಇದು ಏನಿದೆ ಎಂಬುದನ್ನು ನೋಡಿ. ಪಬ್ಲಿಕ್ ಇಂಟರೆಸ್ಟ್‌ನಿಂದ ಜನರಿಗೆ ತೊಂದರೆಯಾಗುತ್ತಿದೆ ಎಂದು ಅವರು ಹೇಳುತ್ತಿದ್ದಾರೆ. Please try to take action. ಇವತ್ತು 11 ಗಂಟೆಗೆ ಆ್ಯಕ್ಷನ್ ಇದೆ ಎಂದು ಹೇಳುತ್ತಿದ್ದಾರೆ.

ಶ್ರೀ ಬಿ.ಸತ್ಯನಾರಾಯಣ (ಕಾರ್ಮಿಕ ರಾಜ್ಯಮಂತ್ರಿ): ಸನ್ಮಾನ್ಯ ಸಭಾಧ್ಯಕ್ಷರೇ, ಇದು ಗುಲ್ಬರ್ಗಾ ಜಿಲ್ಲೆಯ ಶಹಾಬಾದ್‌ನ ಸಿಮೆಂಟ್ ಕಾರ್ಖಾನೆ ಬಗ್ಗೆ ಸನ್ಮಾನ್ಯ ಸದಸ್ಯರು ಮಾತನಾಡಿದ್ದಾರೆ. ನಾನೂ ಸಹ ಅನೇಕ ಸಾರಿ ಅವರ ಒತ್ತಡದ ಮೇಲೆ ಮೂರು ಸಭೆಗಳನ್ನು ಕರೆದು ಈ ಫ್ಯಾಕ್ಟರಿಯಲ್ಲಿ ಉದ್ಭವಿಸಿರತಕ್ಕಂಥ ಸಮಸ್ಯೆಗಳನ್ನು ಸಾಲ್ವ್ ಮಾಡತಕ್ಕಂಥ ಕ್ರಮವನ್ನು ನಾವು ಸರ್ಕಾರದ ವತಿಯಿಂದ ತೆಗೆದುಕೊಂಡಿದ್ದೇವೆ. ಈಗಾಗಲೇ ಅಲ್ಲಿ ಕಾರ್ಮಿಕರಿಗೆ ಬರತಕ್ಕಂಥ ಬಾಕಿ ವೇತನಕ್ಕೆ....

ಶ್ರೀ ಬಿ.ಎಸ್.ಯಡಿಯೂರಪ್ಪ: ನನ್ನ ಕ್ರಿಯಾಲೋಪ ಇದೆ.

ಅಧ್ಯಕ್ಷರು: ಹೇಳಿ. ಕ್ರಿಯಾಲೋಪ ಎಂದರೆ ನೀವು ಈಲ್ಡ್ ಆಗಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ: ದಯಮಾಡಿ ತಮಗೆ ಗೊತ್ತಿರುವ ಹಾಗೆ ನಾನು ಹದಿಮೂರು ವರ್ಷಗಳಿಂದ ಈ ಮನೆಯಲ್ಲಿ ಕೆಲಸ ಮಾಡಿದ್ದೇನೆ. ಒಂದು ಸಾರಿ ಅವಿಶ್ವಾಸ ನಿರ್ಣಯದ ಮೇಲೆ ಚರ್ಚೆ ಪ್ರಾರಂಭ ಮಾಡಿದಮೇಲೆ ಈ ಸರ್ಕಾರದ ಬಗ್ಗೆ ಈ ಒಂದು ಅವಿಶ್ವಾಸ ನಿರ್ಣಯದ ಮತದಾನ ಆಗಿ ಅದು ಸರ್ಕಾರ ಉಳಿಯುತ್ತದೆಯೋ, ಹೋಗುತ್ತದೆಯೋ ಬೇರೆ ವಿಷಯ. ಚರ್ಚೆಯಾಗಿ ವೋಟಿಂಗ್ ಆಗುವ ಸಂದರ್ಭ ಇದೆ. ಈ ವೇಳೆಯಲ್ಲಿ ಬೇರೆ ಯಾವುದೇ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಕೊಡಬಾರದು. ನಮ್ಮ ನಿಯಮಾವಳಿ ಪ್ರಕಾರ....

ಅಧ್ಯಕ್ಷರು: ಚಿಕ್ಕದಾಗಿಬಿಡ್ತಲ್ಲಾ ನಿಮ್ಮ ಹೃದಯ. ದೊಡ್ಡದಾದ ಹೃದಯ ಆಗಲೇ ಚಿಕ್ಕದಾಗಿ ಬಿಟ್ಟಿತಲ್ಲಾ. ಒಂದೇ ನಿಮಿಷಕ್ಕೆ ಚಿಕ್ಕದಾಗಿಬಿಟ್ಟಿತಲ್ಲಾ ನಿಮ್ಮ ಹೃದಯ.

ಶ್ರೀ ಬಿ.ಎಸ್.ಯಡಿಯೂರಪ್ಪ: ದಯಮಾಡಿ ಇಲ್ಲಿ ತಂದಿರತಕ್ಕಂಥ ಅವಿಶ್ವಾಸ ನಿರ್ಣಯದ ಬಗ್ಗೆ ಅದು ಪರ ಮಾಡಲಿ, ವಿರೋಧ ಮಾಡಲಿ ಆ ಕಡೆಯವರಿಗೆ ಅವಕಾಶ ಇದೆ. ನಮ್ಮದೇನೂ ಅಭ್ಯಂತರ ಇಲ್ಲ. ಅಲ್ಲಿಂದ ಅವರು ಈಗ

ಶುರುಮಾಡಿದ್ದಾರೆ. ಭಿನ್ನಮತೀಯ ಶಾಸಕರು ಅದರ ಪರವಾಗಿ ಮಾತನಾಡುತ್ತಾರೆ ಎನ್ನುವ ವಿಶ್ವಾಸ ನನಗೆ ಇದೆ.

ಅಧ್ಯಕ್ಷರು: ಯಾರು ಭಿನ್ನಮತೀಯರು, ಯಾರು ಸಹಮತೀಯರು ನನಗೂ ಅದಕ್ಕೂ ಏನೂ ಸಂಬಂಧ ಇಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ಅದು ಬಿಟ್ಟು ಅವಿಶ್ವಾಸ ನಿರ್ಣಯದ ಬಗ್ಗೆ ಅಲ್ಲದೇನೇ ಬೇರೆ ಯಾವುದೇ ವಿಷಯ ಪ್ರಸ್ತಾಪ ಮಾಡುವುದಕ್ಕೆ ತಾವು ಅವಕಾಶ ಕೊಡಬಾರದು. ನಾವೇ ಒಪ್ಪಿಕೊಂಡಿರುವ ನಿಯಮಾವಳಿ ಪ್ರಕಾರ ಅದು ಸಾಧ್ಯವಿಲ್ಲ. ಅದರಿಂದ ವಿಷಯಾಂತರವಾಗುತ್ತದೆ ಮತ್ತು ಈ ಅವಿಶ್ವಾಸ ನಿರ್ಣಯದ ಮಹತ್ವ ಕಳೆದುಹೋಗುತ್ತದೆ.

ಅಧ್ಯಕ್ಷರು: ಮಂತ್ರಿಗಳೇ, ಸ್ಟೇಟ್‌ಮೆಂಟ್ ಏನೂ ಬೇಕಾಗಿಲ್ಲ. ಅವರನ್ನು ಕರೆದು ಮಾತನಾಡಿ ಕ್ರಮ ತೆಗೆದುಕೊಳ್ಳಿ. I am ordering you to sit down. ತಾವು ಈಗ ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳಬೇಕು ಎಂದು ನಾನು ಆದೇಶ ಕೊಡುತ್ತಿದ್ದೇನೆ. ತಾವಿಬ್ಬರೂ ತಮ್ಮ ಸ್ಥಾನಗಳಲ್ಲಿ ಕುಳಿತುಕೊಳ್ಳಬೇಕೆಂದು ನಾನು ಹೇಳುತ್ತಿದ್ದೇನೆ. ಸದನದ ನಿಯಮಕ್ಕೆ ತಾವು ಗೌರವ ಕೊಡಬೇಕಾಗುತ್ತದೆ. ಅಧ್ಯಕ್ಷರ ಆದೇಶವನ್ನು ತಾವು ಗೌರವಿಸಬೇಕಾಗುತ್ತದೆ.....

ಶ್ರೀ ವೈಜನಾಥ ಪಾಟೀಲ್: ಬೇರೆ ವಿಷಯದ ಮೇಲೆ ಮಾತನಾಡಿದ್ದೇವೆ...

ಅಧ್ಯಕ್ಷರು: ತಮಗೆ ಮತ್ತೊಮ್ಮೆ ನಾನು ಅವಕಾಶ ಕೊಡುತ್ತಿದ್ದೇನೆ. ತಾವು ನನ್ನ ಆದೇಶವನ್ನು ಪಾಲಿಸಬೇಕು. ತಾವು ತಮ್ಮ ಸ್ಥಾನಗಳಲ್ಲಿ ಕುಳಿತುಕೊಳ್ಳುವಂಥವರಾಗಬೇಕು. ಕಾರ್ಮಿಕ ಮಂತ್ರಿಗಳು ಯಾರಿದ್ದಾರೆ ಅವರು ತಮ್ಮನ್ನು ಕರೆಸಿ ಮಾತನಾಡಿ ನಿಮ್ಮ ಸಮಸ್ಯೆ ಏನಿದೆ ಅದನ್ನು ಪರಿಹಾರ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಅದನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ.

ಶ್ರೀ ಸಿ.ಗುರುನಾಥ್: ಸರ್, ನಾನು ಒಂದು ವರ್ಷದಿಂದ ಎಲ್ಲಾ ಮಂತ್ರಿಗಳನ್ನು ಭೇಟಿಯಾಗಿದ್ದೇನೆ.

ಅಧ್ಯಕ್ಷರು: ನಿಮಗೆ ಮತ್ತೊಮ್ಮೆ ಅವಕಾಶ ಕೊಡುತ್ತಿದ್ದೇನೆ. ಈ ಸದನದಲ್ಲಿ ಕಳೆದ ನಾಲ್ಕು ವರ್ಷದಲ್ಲಿ ನಾನು ಉಗ್ರಕ್ರಮವನ್ನು ಎಂತಹ ಸನ್ನಿವೇಶದಲ್ಲೂ ಯಾವುದೇ ಸದಸ್ಯರ ಮೇಲೆ ತೆಗೆದುಕೊಂಡಿಲ್ಲ...

ಶ್ರೀ ಸಿ.ಗುರುನಾಥ್: ಕಾನೂನಿನಲ್ಲಿ ಏನಿದೆ ಅದನ್ನು ತೆಗೆದುಕೊಳ್ಳಿ. ಅದರಲ್ಲೇನೂ ಇಲ್ಲ. ಆದರೆ ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು. ಯಾವ್ಯಾವ

ಮಂತ್ರಿಗಳ ಕಡೆಗೆ ಹೋಗಿದ್ದೇವೆ, ಯಾವ್ಯಾವ ಅಧಿಕಾರಿಗಳ ಕಡೆಗೆ ಹೋಗಿದ್ದೇವೆ, ಎಷ್ಟು ಕಷ್ಟ ಅನುಭವಿಸಿದ್ದೇವೆ ಎನ್ನುವುದರ ಬಗ್ಗೆ ನಮಗ ಹೇಳಬೇಕಾಗಿದೆ. ನೀವು **

ಅಧ್ಯಕ್ಷರು: ಈಗ ಇಡೀ ಸದನ ಶ್ರೀಮಾನ್ ವೈಜನಾಥ ಪಾಟೀಲರ ಮಾತುಗಳನ್ನು ಕೇಳಿದೆ.

ಶ್ರೀ ವೈಜನಾಥ ಪಾಟೀಲ್: ಇದು ಬೆದರಿಕೆಯೇ?

ಅಧ್ಯಕ್ಷರು: ನಾನಲ್ಲ ಬೆದರಿಸಿದ್ದು. ನಾನು ಅವರಲ್ಲಿ ವಿನಂತಿ ಮಾಡಿಕೊಂಡಿದ್ದೆ. ಒಂದು ಸಲ ಬಿಟ್ಟು ನಾಲ್ಕು ಸಲ ವಿನಂತಿ ಮಾಡಿದ್ದೆ. ಸಭೆಯ ನಿಯಮಗಳಿಗೆ ಗೌರವ ಕೊಡಬೇಕು, ಅಧ್ಯಕ್ಷರ ಆದೇಶವನ್ನು ಗೌರವಿಸಬೇಕು ಅಂತ...

ಶ್ರೀ ವೈಜನಾಥ ಪಾಟೀಲ್: ಏನು ** ತೆಗೆದುಕೊಳ್ಳುತ್ತೀರಿ?

MR. SPEAKER: I think I cannot sit here. ಈ ತರಹ He is insinuating the Chair directly.

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು: ನಾಣಯ್ಯನವರೇ, ನಾನು ಒಂದು ಮಾತು ಹೇಳುತ್ತೇನೆ. ನಾನು ಸಭಾಧ್ಯಕ್ಷನಾಗಿ ಕೆಲಸ ನಿರ್ವಹಿಸುವ ವೇಳೆಗೆ ನನ್ನದೇ ಆದಂಥ ಕೆಲವು ವಿಚಾರಗಳನ್ನು ಇಟ್ಟುಕೊಂಡು ನಡೆಸಿದ್ದೇನೆ. ಅತ್ಯಂತ ದೊಡ್ಡ ವಿರೋಧಪಕ್ಷ ಇಲ್ಲಿದ್ದರೂ ಕೂಡ ಎಲ್ಲಾ ವಿರೋಧ ಪಕ್ಷಗಳನ್ನು ಒಟ್ಟುಮಾಡಿ ಕಳೆದ ನಾಲ್ಕು ವರ್ಷಗಳಲ್ಲಿ ಎಂತಹ ಸನ್ನಿವೇಶ ಬಂದರೂ ಕೂಡ ನಾವು ಕೂತು, ಮಾತುಕತೆ ಮೂಲಕ, ಸಂಧಾನದ ಮೂಲಕ, ಚರ್ಚೆ ಮೂಲಕ ಹರಿಸಿಕೊಂಡಿದ್ದೇವೆಯೇ ಹೊರತು ನಾವು ತೀವ್ರವಾದ ಹಂತ ತಲುಪಿಲ್ಲ. ನೇಮಿಂಗ್ ಮಾಡುವುದು ಮತ್ತೊಂದು ಮಾಡಿಲ್ಲ. ಇವತ್ತು ನಿಮ್ಮ ಪಕ್ಷದ ಸದಸ್ಯರೊಬ್ಬರು ಈ ರೀತಿ ಮಾಡಿದ್ದಾರೆ. ಆ ಹಂತ ತಲುಪುವುದಕ್ಕೆ ನನಗೆ ಇಷ್ಟ ಇಲ್ಲ. ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೋ ನಿಮಗೆ ಬಿಡುತ್ತೇನೆ. ಅವರು ಬೆದರಿಸುತ್ತಾರೆ, ನಾನು ಬೆದರಿಸಲಿಲ್ಲ. ನಾನು ವಿನಂತಿ ಮಾಡಿಕೊಂಡಿದ್ದೇನೆ. ಆದ್ದರಿಂದ, ದಯಮಾಡಿ, ಕೇಳಿ. ನೀವು ಹೇಳುವ ಮಾತನ್ನು ಕೇಳುವುದಕ್ಕೆ ನನಗೆ ತಾಳ್ಮೆಯೂ ಇಲ್ಲ; ನಾನು ತಯಾರೂ ಇಲ್ಲ. ನಾನು 10 ನಿಮಿಷ ಸಭೆಯನ್ನು ಮುಂದಕ್ಕೆ ಹಾಕುತ್ತೇನೆ. ನೀವು ಈ ವಿಚಾರ ಪರಿಹಾರ ಮಾಡಿಕೊಂಡು ಒಳಗೆ ಬನ್ನಿ. ನನಗೆ, ಅವರೇನು ಬೆದರಿಕೆ ಹಾಕಿದ್ದಾರೆ ಏನು ಕ್ರಮ ತೆಗೆದುಕೊಳ್ಳಬೇಕೋ ತೆಗೆದುಕೊಳ್ಳಿ ಎಂದು ಪುಸ್ತಕ ಬಿಸಾಕಿ'' ಆ ರೀತಿ ಅನ್ನಿಸಿಕೊಂಡು ಈ ಪೀಠದಲ್ಲಿ ಕುಳಿತುಕೊಳ್ಳುವುದಕ್ಕೆ ನಾನು ತಯಾರಾಗಿಲ್ಲ.

---

** ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ವಾಟಾಳ್ ನಾಗರಾಜ್: ಅಧ್ಯಕ್ಷರೇ, ತಾವು ಸ್ವಲ್ಪ ಸಾವಧಾನವಾಗಿ. ಈ ಸದನದ ಬಗ್ಗೆ ಚರ್ಚೆಯಾಗಬೇಕು. ತಾವು ಎದ್ದು ಹೋಗುವುದು ಬೇಕಾಗಿಲ್ಲ.

ಅಧ್ಯಕ್ಷರು: ಅವರೆಲ್ಲಾ ಮಂತ್ರಿಗಳಾಗುತ್ತಾರೆ, ರಾಜ್ಯ ನಡೆಸುತ್ತಾರೆ, ಅವರಿಗೆ ಮಿನಿಮಂ ರೂಲ್ಸ್ ಗೊತ್ತಿಲ್ಲ. ಕರ್ಟಸೀಸ್ ಇರುವುದಿಲ್ಲ. ನಾನು ಮೇಲಿಂದ ಮೇಲೆ ಅಪೀಲು ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಈ ಸದನದಲ್ಲಿ ಚರ್ಚೆಯಾಗಲಿ. ದಯಮಾಡಿ ತಾವು ಹೋಗಬಾರದು. ಇದರ ಬಗ್ಗೆ ಸಮಗ್ರವಾಗಿ ಚರ್ಚೆಯಾಗಲಿ. ತಾವು ಎದ್ದು ಹೋಗತಕ್ಕ ಪ್ರಶ್ನೆಗೆ ಹೋಗುವುದು ಬೇಡ.

ಅಧ್ಯಕ್ಷರು: ಆಪೊಸಿಷನ್ ಲೀಡರ್, ಬಿಜೆಪಿ ಲೀಡರ್ ಅವರೂ ಕೂಡ ಉದ್ವೇಗಕ್ಕೆ ಒಳಗಾಗುತ್ತಾರೆ. ಅವರಿಗೆ ಸಮಜಾಯಿಷಿ ಹೇಳುತ್ತೇನೆ, ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತೆ ವಾಪಸ್ ಬರುತ್ತಾರೆ, ಒಂದು ದಿವಸ ಕೂಡ ಈ ರೀತಿ ಪ್ರಶ್ನೆ ಮಾಡಿಲ್ಲ.

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಸಭಾಧ್ಯಕ್ಷರೇ, ಈ ಸದನದಲ್ಲಿ ತಾವು ಕೊಡುತ್ತಿರತಕ್ಕ ಆದೇಶವನ್ನು ಪ್ರತಿಯೊಬ್ಬರೂ ತಲೆಬಾಗಿ ಸ್ವೀಕಾರ ಮಾಡಲೇಬೇಕು. ಯಾರಾದರೂ ಒಬ್ಬ ಮಾನ್ಯ ಸಭಾಧ್ಯಕ್ಷರ ತೀರ್ಪಿಗೆ ವಿರುದ್ಧವಾಗಿ, ಸಭಾಧ್ಯಕ್ಷರ ವಿರುದ್ಧ ಮಾತನಾಡುವುದಾದರೆ, ನಮ್ಮ ನಿಯಮಾವಳಿಗಳ ಅಡಿಯಲ್ಲಿ ಅಂತಹ ಸದಸ್ಯರ ಬಗ್ಗೆ ಕೈಗೊಳ್ಳಲಿಕ್ಕೆ ಇರತಕ್ಕ ಅಧಿಕಾರ, ಈ ಸದನದಲ್ಲಿ ನಾವೇ ರಚನೆ ಮಾಡಿಕೊಂಡಿದ್ದೇವೆ. ಆದ್ದರಿಂದ ಮಾನ್ಯ ನನ್ನ ಮಿತ್ರರಾಗಿರತಕ್ಕ ವೈಜನಾಥ ಪಾಟೀಲರು ಮಾನ್ಯ ಸಭಾಧ್ಯಕ್ಷರಿಗೆ ಆಡಿರತಕ್ಕ ಮಾತುಗಳನ್ನು ಅವರು ಗೌರವಪೂರ್ವಕವಾಗಿ ಹಿಂದಕ್ಕೆ ತೆಗೆದುಕೊಳ್ಳಬೇಕು. ನಾನು ಹೇಳುತ್ತಾ ಇದ್ದೇನೆ. ಈ ಸರ್ವೋಚ್ಚ ಸದನದಲ್ಲಿ, ಮಾನ್ಯ ಸಭಾಧ್ಯಕ್ಷರು ಯಾವುದೇ ತೀರ್ಮಾನವನ್ನು ಕೊಡತಕ್ಕ ಹಿನ್ನೆಲೆಯಲ್ಲಿ, ಆ ಸಂದರ್ಭದಲ್ಲಿ ದಯಪಾಲಿಸಬೇಕಾದುದು ನಮ್ಮ ಕರ್ತವ್ಯ. ಆದ್ದರಿಂದ, ಸದನದಲ್ಲಿದ್ದುಕೊಂಡು ಪ್ರತಿಯೊಬ್ಬ ಸದಸ್ಯ, ಸಭಾಧ್ಯಕ್ಷರ ತೀರ್ಮಾನವನ್ನು ಪ್ರಶ್ನೆ ಮಾಡುವುದಾದರೆ, ನಾನು ಹೇಳುತ್ತಾ ಇದ್ದೇನೆ. ಅಂತಹ ಪ್ರಶ್ನೆ ಮಾಡತಕ್ಕ ಸದಸ್ಯರ ವಿರುದ್ಧ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಇರತಕ್ಕ ಅವಕಾಶ ನಮ್ಮ ನಿಯಮಗಳಲ್ಲಿ ಇದೆ. ನಾನು ಪಾರ್ಲಿಮೆಂಟರಿ ಅಫೈರ್ಸ್ ಮಿನಿಸ್ಟರಾಗಿ ನಾನು ಒಂದು ನಿರ್ಣಯವನ್ನು ಮಂಡಿಸಲೇಬೇಕಾಗುತ್ತದೆ. ಆದ್ದರಿಂದ, ನನ್ನ ಮಿತ್ರರಾಗಿರತಕ್ಕ ವೈಜನಾಥ ಪಾಟೀಲರಿಗೆ ಹೇಳುತ್ತಿದ್ದೇನೆ, ತಾವೇನು ಪದಗಳನ್ನು ಉಪಯೋಗಿಸಿದ್ದೀರಿ, ಅವುಗಳನ್ನು ಹಿಂದಕ್ಕೆ ಪಡೆದುಕೊಳ್ಳಬೇಕಾಗುತ್ತದೆ. ಮತ್ತು ಆಡಿರತಕ್ಕ ಮಾತಿಗೆ ತಾವು ವಿಷಾದವನ್ನು ವ್ಯಕ್ತಮಾಡಲೇಬೇಕಾಗುತ್ತದೆ. ಇಲ್ಲದೇ ಹೋದರೆ, ನಾವು ಸದನದ ನಿಯಮಗಳ ಅಡಿಯಲ್ಲಿ, ಒಂದು ನಿರ್ಣಯವನ್ನು ಮಂಡಿಸತಕ್ಕ ಒಂದು ನೋವಿನ ಕೆಲಸವನ್ನೂ

ಕೂಡ ಮಾಡಬೇಕಾಗುತ್ತದೆ. ತಾವು ದಯವಿಟ್ಟು ನಾನು ಹೇಳುತ್ತಾ ಇದ್ದೇನೆ. ತಾವು ಈ ಕೆಲಸವನ್ನು ಮಾಡಿ. ಮಾನ್ಯ ಸಭಾಧ್ಯಕ್ಷರೇ, ತಾವು, ತಮಗಿರತಕ್ಕ ಅಧಿಕಾರವನ್ನು ಚಲಾವಣೆ ಮಾಡುವುದಕ್ಕೆ ಸಂಪೂರ್ಣವಾದ ಅಧಿಕಾರವನ್ನು ಕೊಟ್ಟಿದ್ದೇವೆ. ಯಾವುದಾದರೂ ಸದಸ್ಯರು ಇಲ್ಲಿ ಅನುಚಿತವಾಗಿ ವರ್ತನೆ ಮಾಡಿದರೆ, ಅವರನ್ನು ಹೊರಗೆ ಹಾಕುವುದಕ್ಕೂ ಕೂಡ ಈ ನಿಯಮಗಳಲ್ಲಿ ಅವಕಾಶ ಇದೆ. ಅಂತಹ ಸಂದರ್ಭದಲ್ಲಿ ಈ ಸದನದ ಸಂಪೂರ್ಣ ತೀರ್ಪನ್ನು ಕೈಗೊಂಡು ಮಾಡಬೇಕಾಗುತ್ತದೆ. ಆದ್ದರಿಂದ, ತಾವು ಮನನೊಂದು ಹೋಗುವುದಲ್ಲ. ಇದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸದನದ ವತಿಯಿಂದ ನಾನು ಒಂದು ನಿರ್ಣಯವನ್ನು ಮಾಡುತ್ತೇನೆ. ಆದ್ದರಿಂದ, ಮಿತ್ರರಾಗಿರತಕ್ಕ ವೈಜನಾಥ ಪಾಟೀಲರನ್ನು ಕೇಳಿಕೊಳ್ಳುತ್ತಿದ್ದೇನೆ. ತಾವು ಅಡಿರತಕ್ಕ ಪದಗಳನ್ನು ದಯವಿಟ್ಟು ಹಿಂದಕ್ಕೆ ತೆಗೆದುಕೊಂಡು, ವಿಷಾದವನ್ನು ವ್ಯಕ್ತಮಾಡಬೇಕಾಗುತ್ತದೆ.

ಶ್ರೀ ವೈಜನಾಥ ಪಾಟೀಲ್: ಹೋದ ಒಂದು ವಾರದಿಂದ ಅವಿಶ್ವಾಸ ನಿರ್ಣಯದ ಮೇಲೆ ಚರ್ಚೆಯಾಗುತ್ತಾ ಇದೆ. ಪ್ರತಿಯೊಬ್ಬರೂ ಒಂದೊಂದು ತಾಸು, ಎರಡೆರಡು ತಾಸು ಮಾತನಾಡುತ್ತಿದ್ದಾರೆ. ನಾನು ಎರಡು ನಿಮಿಷಗಳ ಕಾಲ, ಜೀರೋ ಹವರ್‌ನಲ್ಲಿ ಮಾತನಾಡುವುದಕ್ಕೆ ಅವಕಾಶ ಇಲ್ಲವೆಂದು ಹೇಳುತ್ತಾ ಇದ್ದಾರೆ. ಈ ದೃಷ್ಟಿಯಿಂದ ಇವತ್ತು ಮಾನ್ಯ ಗುರುನಾಥ್‌ರವರೂ ಕೂಡ ಒಂದು ಪ್ರಶ್ನೆ ಕೇಳಿದ್ದಾರೆ. ಕಳೆದ 8 ತಿಂಗಳಿಂದ ಒಂದು ಇಂಡಸ್ಟ್ರಿಯಲಿಸ್ಟ್, ಅಲ್ಲಿ ಲೇಬರ್ಸ್‌ಗೆ ಸಂಬಳ ಕೊಡುತ್ತಾ ಇಲ್ಲ. ಅವರಿಗೆ ಕರೆದು ಮಾತನಾಡುತ್ತಾ ಇಲ್ಲ. ಕೊನೆಗೆ ಸರ್ಕಾರದ ವತಿಯಿಂದ ಸಂಬಳ ಕೊಡಬೇಕಾದರೆ, ಆಕ್ಷನ್ ಮಾಡಿ ಕೊಡಬೇಕೆಂದು ನಿರ್ಣಯವಾಗಿದೆ. ಇವತ್ತು ಆಕ್ಷನ್ ಆಗಬೇಕಾಗಿದೆ. ಇದ್ದಕ್ಕಿದ್ದಹಾಗೆ ಆಕ್ಷನ್ ಮುಂದೂಡಬೇಕೆಂದು ಮತ್ತೆ ಸರ್ಕಾರ ನಿರ್ಣಯ ತೆಗೆದುಕೊಂಡಿದೆ. ಅದೊಂದು ಇಂಪಾರ್ಟೆಂಟ್ ವಿಷಯ. ಈ ರಾಜ್ಯದಲ್ಲಿ 70 ಪರ್ಸೆಂಟ್ ಜನಸಂಖ್ಯೆ ಹಳ್ಳಿಯಲ್ಲಿರುವುದು. ಆದರೆ, ಕಳೆದ ಎರಡು ಮೂರು ವರ್ಷಗಳಿಂದ, ಒಂದು ಹೊಸ ರಿಸರ್ವೇಷನ್ ಪದ್ಧತಿ ಮಾಡಿದ್ದಾರೆ. ರೂರಲ್ ಸಲುವಾಗಿ 15 ಪರ್ಸೆಂಟ್...

ಅಧ್ಯಕ್ಷರು: ನಿಮಗೆ ಅವಕಾಶ ಕೊಟ್ಟಿರತಕ್ಕಂಥಾದ್ದು ಕ್ಷಮೆ ಯಾಚನೆ ಮಾಡಲಿಕ್ಕೆ. Nothing will go on record.

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ವೈಜನಾಥ ಪಾಟೀಲರು ದಯವಿಟ್ಟು ಕೇಳಬೇಕು. ಮಾನ್ಯ ಸಭಾಧ್ಯಕ್ಷರು ಹೇಳಿದ್ದಾರೆ. ಇವತ್ತು ನಾವು ಅವಿಶ್ವಾಸ ನಿರ್ಣಯದ ಬಗ್ಗೆ ಚರ್ಚೆ ಮಾಡುತ್ತಾ ಇದ್ದೇವೆ. ಎತ್ತಿರತಕ್ಕಂಥ ಹಲವಾರು ವಿಚಾರಗಳು ಉಂಟು. ಈ ವಿಚಾರಗಳನ್ನು ಚರ್ಚೆ ಮಾಡುವುದಕ್ಕೆ ಸಮಯವನ್ನು ನಿಗದಿ ಮಾಡುತ್ತೇವೆಂದು ನಿಮಗೆಲ್ಲರಿಗೂ ಹೇಳಿದ್ದಾರೆ. ಸಮಯವನ್ನು ನಿಗದಿ ಮಾಡಿಕೊಡುತ್ತೇವೆಂದು ಹೇಳಿ,

ನೀವು ಹೇಳುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಆದರೂ ಕೂಡ ತಾವು ಪದೇಪದೇ ಇದನ್ನೇ ಎತ್ತಿ, ಮಾನ್ಯಸಭಾಧ್ಯಕ್ಷರ ತೀರ್ಪನ್ನು ಉಲ್ಲಂಘನೆ ಮಾಡುತ್ತಿರತಕ್ಕ ರೀತಿಯಲ್ಲಿ ತಾವು ಮಾತನಾಡಿರುವುದಕ್ಕೆ ಸಂಬಂಧಪಟ್ಟ ಹಾಗೆ ಮಾತ್ರ ನಾನು ಹೇಳುತ್ತಿದ್ದೇನೆ. ತಾವು ಆಡಿರತಕ್ಕ ಮಾತುಗಳನ್ನು ಹಿಂದಕ್ಕೆ ಪಡೆದು, ತಾವು ವಿಷಾದವನ್ನು ವ್ಯಕ್ತಮಾಡಬೇಕಾಗುತ್ತದೆ. ಪುನಃ ಪುನಃ ಇದನ್ನು ಪುನರುಚ್ಚಾರ ಮಾಡುವುದಕ್ಕೆ, ಈ ಸದನದ ಸಮಯವನ್ನು ಎಳೆಯಬಾರದು. ದಯವಿಟ್ಟು ಆ ಕೆಲಸ ತಾವು ಮಾಡಿ.

ಶ್ರೀ ವೈಜನಾಥ ಪಾಟೀಲ್: ಇವತ್ತು ಸಾಯಂಕಾಲದ ಹೊತ್ತಿಗೆ, ನಿರ್ಣಯದ ಮೇಲೆ ಚರ್ಚೆ ಮುಗಿದ ನಂತರ, ಚೇರ್ ಒಂದುವೇಳೆ ಆಶ್ವಾಸನೆ ಕೊಟ್ಟಿದ್ದರೆ, ನಾನು ಈ ವಿಷಯವನ್ನು ಹಿಂದಕ್ಕೆ ತೆಗೆದುಕೊಳ್ಳುತ್ತೇನೆ. ಏಕೆಂದರೆ, ಇಲ್ಲಿ ಅವಕಾಶ ಇಲ್ಲವೆಂದರೆ, ಎಲ್ಲಿಯೂ ಸಿಗುವುದಿಲ್ಲ. ನಾವು ಸದಸ್ಯರಿದ್ದೇವೆ. ರೂಲಿಂಗ್ ಪಾರ್ಟಿ ಸದಸ್ಯರಿರಲಿ, ವಿರೋಧ ಪಕ್ಷದ ಸದಸ್ಯರಿರಲಿ. ಅವಕಾಶ ಕೊಡುವುದಿಲ್ಲವೆಂದು ಹೇಳಿದರೆ, ನಾವು ಪಬ್ಲಿಕ್ ಮೀಟಿಂಗ್‌ನಲ್ಲಿ ಹೇಳುವುದಕ್ಕಾಗುತ್ತದೆಯೇ? ಇಲ್ಲಿ ಸರ್ಕಾರದ ಎದುರೇ ಈ ಸದನದಲ್ಲಿ ಹೇಳಬೇಕಾಗುತ್ತದೆ. ಆ ದೃಷ್ಟಿಯಿಂದ ಸ್ಪೀಕರ್ ಅವರಿಗೆ, ಮನಸ್ಸಿಗೆ ಏನಾದರೂ ನೋವಾಗಿದ್ದರೆ, I regret for that.

ಶ್ರೀ ಹೆಚ್.ಎನ್.ನಂಜೇಗೌಡ: ಸಭಾಧ್ಯಕ್ಷರೇ, ಈ ಹಿಂದೆ, ಈ ಸದನದಲ್ಲಿ ಕಬ್ಬನ್ ಪಾರ್ಕ್ ವಿವಾದಕ್ಕೆ ಸಂಬಂಧಿಸಿದ ಹಾಗೆ ಚರ್ಚೆಯಾಗಿದೆ.

ಶ್ರೀ ವಸಂತ ವಿ ಸಾಲಿಯಾನ್: ಅಧ್ಯಕ್ಷರೇ, ಇದರ ಬಗ್ಗೆ ತಾವು ಹೇಗೆ...

ಅಧ್ಯಕ್ಷರು: ಪ್ರಿವಿಲೇಜ್, I have to permit..

**(ಆ) ಕಬ್ಬನ ಪಾರ್ಕ್ ವಿಷಯದ ಬಗ್ಗೆ**

+ ಶ್ರೀ ಹೆಚ್.ಎನ್.ನಂಜೇಗೌಡ (ಬಸವನಗುಡಿ): ನಾನು ಹೆಚ್ಚಿಗೆ ಟೈಮ್ ತೆಗೆದುಕೊಳ್ಳುವುದಿಲ್ಲ. ಸಬ್‌ಮಿಷನ್ ಮಾತ್ರ ಮಾಡುತ್ತೇನೆ. ಕಬ್ಬನ್ ಪಾರ್ಕ್ ವಿಷಯ ಇಲ್ಲಿ ಚರ್ಚೆಯಾಯಿತು. ಅದಾದ ನಂತರ, ತಮ್ಮ ಸರ್ವಸದಸ್ಯರ ತಿಳುವಳಿಕೆ ನಿಲುಕುವ ರೀತಿಯಲ್ಲಿ ತಾವು ಇಲ್ಲಿ ಆ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೀರಿ. ಅದರ ವಿವರಗಳಿಗೆ ನಾನು ಹೋಗುವುದಿಲ್ಲ. ತದನಂತರ, ಇದೇ ವಿಚಾರಕ್ಕೆ ಹೈಕೋರ್ಟಿನ ನ್ಯಾಯಾಧೀಶರೊಬ್ಬರು, ಪ್ರೆಸ್ ಕ್ಲಬ್‌ಗೆ ಹೋಗಿ, ಪ್ರೆಸ್ ಕಾನ್‌ಫರೆನ್ಸ್ ಮಾಡುತ್ತಾರೆ. ಅದಾದ ಮೇಲೆ ಬೆಳಗಾಂಗೆ ಹೋಗಿದ್ದಾರೆ. ಅವರು ತಮ್ಮ ಚೇಂಬರ್ಸಿನಲ್ಲಿ ಕುಳಿತು ಮಾತನಾಡಿಲ್ಲ. ಆದರೆ, ಆರ್ಟಿಕಲ್ 194ರ ಪ್ರಕಾರ, ನಮಗೆ ಈ ಸದನದ ಸದಸ್ಯರಿಗೆ, ಈ ಸದನಕ್ಕೆ ಯಾರ ಹೆಸರು ಹೇಳಿದರೂ ಕೂಡ we have got complete